**ಪಿಡಬ್ಲೂ 1** **ಅಸಲು ದಾವೆ ನಂ.06/2019**

**ದಿನಾಂಕ 30-11-2021 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀಸವಾಲುಃ ಶ್ರೀ. ಆರ್.ಸಿ.ಎಸ್. ಪ್ರತಿವಾದಿ ಪರ ವಕೀಲರಿಂದಃ-**

ನನ್ನ ವಿದ್ಯಾಭ್ಯಾಸ 5 ನೇ ತರಗತಿ. ಪ್ರತಿವಾದಿಯರು ಸಲ್ಲಿಸಿದ ತಕರಾರುಗಳ ಬಗ್ಗೆ ಮತ್ತು ಅವರು ಸಲ್ಲಿಸಿರುವ ದಾಖಲೆಗಳ ನನಗೆ ಗೊತ್ತು. ನಿ.ಪಿ.1 ಖಾಲಿ ಸೈಟಿಗೆ ಸಂಬಂಧಪಟ್ಟಿದ್ದು. ಅವರು ಸರ್ವೇ ನಂಬರ್ ನ ದಾಖಲಾತಿಗಳನ್ನು ಕೊಟ್ಟಿರುತ್ತಾರೆ, ಆದರೆ ಅದನ್ನು ನಾವು ಗ್ರಾಮ ಠಾಣೆಗೆ ಸಂಬಂಧಪಟ್ಟಿದ್ದು ಎಂದು ನಾವು ಹೇಳುತ್ತಿದ್ದೇವೆ.

ಪ್ರತಿವಾದಿಗಳು ಸಲ್ಲಿಸಿರುವ ದಾಖಲೆಯ ಸರ್ವೇ ನಂಬರ್ 50. ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ.

ನನ್ನ ಮಾರಾಟಗಾರರು ದಾವಾ ಆಸ್ತಿಯ ಮೇಲೆ ಸಾಲವನ್ನು ಮಾಡಿದ್ದರ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮಾರಾಟಗಾರರು ಯಾವ ಸೈಟಿನ ಮೇಲೆ ಸಾಲವನ್ನು ಮಾಡಿದ್ದರು ಎಂಬುವುದರ ಬಗ್ಗೆ ನನಗೆ ಗೊತ್ತಿಲ್ಲ.

ನಾವು ಗ್ರಾಮ ಠಾಣಾದಲ್ಲಿರುವ ಆಸ್ತಿಯನ್ನು ಖರೀದಿ ಮಾಡಿರುತ್ತೇವೆ, ಅದಕ್ಕೆ ಸರ್ವೇ ನಂಬರ್ ಇಲ್ಲ ಎನ್ನುತ್ತಾರೆ. ನಾನು ಖರೀದಿ ಮಾಡಿರುವ ಗ್ರಾಮ ಠಾಣಾ ಸೈಟಿನ ಪಕ್ಕದಲ್ಲಿ ಪ್ರತಿವಾದಿಗಳು ವಾಸವಿಲ್ಲ.

ನಾನು ಖರೀದಿ ಮಾಡಿದ ಖಾತಾ ನಂಬರ್ 483/1. ದಾವಾ ಆಸ್ತಿಯಲ್ಲಿ ನಾನು ಮನೆಯನ್ನು ಕಟ್ಟಿಲ್ಲ. ದಾವಾ ಆಸ್ತಿಯಲ್ಲಿ ನನ್ನ ಮಾರಾಟಗಾರರು ಸಹ ಮನೆಯನ್ನು ಕಟ್ಟಿಲ್ಲ. ನನ್ನ ಮಾರಾಟಗಾರರು ಅವರ ಬೇರೆ ಸೈಟಿನಲ್ಲಿ ಮನೆಯನ್ನು ಕಟ್ಟಿಕೊಂಡಿರುತ್ತಾರೆ. ನಾವು 2017 ರಲ್ಲಿ

ದಾವಾ ಆಸ್ತಿಯಲ್ಲಿ ಪಾಯ ಹಾಕಿರುತ್ತೇವೆ. ನಾವು ಪಾಯ ಹಾಕುವುದಕ್ಕಿಂತ ಮುಂಚೆ ಲೈಸನ್ಸ್‌ನ್ನು ಪಡೆದಿರುತ್ತೇವೆ. ಇದಕ್ಕೆಲ್ಲಾ ಯಜಮಾನರು ನನ್ನ ಗಂಡ ಎಂದರೆ ಸರಿ.

ದಾವಾ ಆಸ್ತಿಯಲ್ಲಿ ಈಗಾಗಲೇ ನನ್ನ ಮಾರಾಟಗಾರರು ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನನ್ನ ಮಾರಾಟಗಾರರು ಸಾಲವನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ಮಾರಾಟಗಾರರಿಗೆ ತೊಂದರೆ ಮಾಡುತ್ತಿದ್ದೇನೆಂದರೆ ಸರಿಯಲ್ಲ. ನಾನು ಮತ್ತು ನನ್ನ ಮಾರಾಟಗಾರರು ಒಂದಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿ ನಾವು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ನಮ್ಮ ಮನೆ ಬರುತ್ತದೆ. ಸದರಿ ಮನೆಯನ್ನು ಕಟ್ಟಿ 30 ವರ್ಷಗಳಾಗಿರುತ್ತವೆ. ನಾನು ಪಾಯ ಹಾಕಲು ಹೋಗಿಲ್ಲ, ಪ್ರತಿವಾದಿಗಳು ಅಡ್ಡ ಬಂದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**–

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**( ರೂಪಾ.ಸಿ. ವಗ್ಗಾ)**
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.